ದಿನಾಂಕಃ 01.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಃ ಶ್ರೀ ಕೆ ಕೆ ವಕೀಲರಿಂದಃ

1. ನಂದೀಶ್ ನನ್ನ ತಮ್ಮ. ನನ್ನ ತಮ್ಮ ನಂದೀಶ್ ದಿಃ 17.04.2021 ರಂದು ಮರಣ ಹೊಂದಿರುತ್ತಾರೆ. ಆತ ಮರಣ ಹೊಂದಿದಾಗ ನಾನು ಕೊಡಿಯಾಲ ಗ್ರಾಮದಲ್ಲಿ ವಾಸವಾಗಿದ್ದೆ. ನಾನು ನನ್ನ ತಮ್ಮ ನಂದೀಶ್ ನೊಂದಿಗೆ ವಾಸವಾಗಿರಲಿಲ್ಲ, ಆದರೆ ಆತನ ಮನೆಗೆ ಹೋಗಿ ಬರುವುದು ಮಾಡುತ್ತಿದ್ದೆ. ನಂದೀಶ್ ಮರಣ ಹೊಂದುವ 1 ತಿಂಗಳ ಪೂರ್ವದಲ್ಲಿ ಆತನ ಮನೆಗೆ ಹೋಗಿದ್ದೆ. ನನಗೆ ನಿರ್ದಿಷ್ಟ ದಿನಾಂಕ ನೆನಪಿಲ್ಲ. ನಾನು ನಂದೀಶ್ ನೊಂದಿಗೆ ವಾಸವಿಲ್ಲದ ಕಾರಣ, ಆತನ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಂದೀಶ್ ಹೆಸರಿನಲ್ಲಿ ಮನೆ ಮತ್ತು ಜಮೀನು ಇದೆ ಎಂದರೆ ಸರಿ. ಸದರಿ ಮನೆಯನ್ನು ಕಟ್ಟಿ ಸುಮಾರು 9 ವರ್ಷವಾಗಿರುತ್ತದೆ. ನಾನು ನಂದೀಶ್ ಜೊತೆ ವಾಸವಿಲ್ಲದಿದ್ದರೂ ನಾನು ಆತನ ಮನೆಗೆ ಹೋಗಿ ಬರುತ್ತಿದ್ದ ಕಾರಣ ನನಗೆ ಅವರ ವ್ಯವಹಾರ ಎಲ್ಲಾ ತಿಳಿದಿರುತ್ತದೆ. ಮನೆ ಮತ್ತು ಜಮೀನಿಗೆ ಸಂಬಂಧಿಸಿದಂತೆ ನಾನು ಕೇಸ್ ಹಾಕಿದ್ದೇನೆ ಎಂದರೆ ಸರಿ. ಆ ವಿಚಾರವನ್ನು ನಾನು ಈ ಕೇಸಿನಲ್ಲಿ ಹೇಳಿರುವುದಿಲ್ಲ ಹಾಗೂ ಸದರಿ ವಿಚಾರವನ್ನು ತಿಳಿಸಲು ನನಗೆ ಯಾವುದೇ ತೊಂದರೆ ಸಹ ಇರುವುದಿಲ್ಲ. ನಾನು ಮನೆ ಕಟ್ಟಿರುವ ದಾಖಲಾತಿಗಳನ್ನು ನೋಡಿರುವುದಿಲ್ಲ.

2. 1 ನೇ ಎದುರುದಾರರು ನಂದೀಶ್ ನೊಂದಿಗೆ ವಾಸವಾಗಿದ್ದಳು ಎಂದರೆ ಸಾಕ್ಷಿ ಆಕೆ ಸಹ ಹೋಗಿ - ಬರುವುದು ಮಾಡುತ್ತಿದ್ದಳು ಎಂದು ನುಡಿಯುತ್ತಾರೆ. 1 ನೇ ಎದುರುದಾರರು ತನ್ನ ಪತಿಯನ್ನು ಬಿಟ್ಟು ನಂದೀಶ್ ನೊಂದಿಗೆ ವಾಸವಾಗಿದ್ದಳು ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಒಡವೆಯನ್ನು ಕೇಳಿದ್ದು, ಅದು ನಂದೀಶ್ ಒಡವೆ ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಆತ ಬ್ಯಾಂಕಿನಲ್ಲಿ ಒಡವೆ ಇಟ್ಟಿರುವುದೇ ನಾನು ಹಾಜರುಪಡಿಸಿರುವ ದಾಖಲಾತಿ. ನಂದೀಶ್ ಆಭರಣವನ್ನು ಎಲ್ಲಿ ಮಾಡಿಸಿದ್ದಾನೆ ಹಾಗೂ ಯಾವಾಗ ಮಾಡಿಸಿದ್ದಾನೆ ಎಂದು ನನಗೆ ಗೊತ್ತಿಲ್ಲ. ನಂದೀಶ್ ಬ್ಯಾಂಕ್ ನಲ್ಲಿಟ್ಟ ಒಡವೆಗಳು 1 ನೇ

ಎದುರುದಾರರಿಗೆ ಸೇರಿದ ಒಡವೆಗಳು ಎಂದರೆ ಸರಿಯಲ್ಲ. ಸಾಕ್ಷಿ ಅದು ನಮ್ಮ ತಾಯಿಯ ಮನೆಯ ಒಡವೆಗಳು ಎಂದು ನುಡಿಯುತ್ತಾರೆ. ನಾನು ಈ ಕೇಸಿನಲ್ಲಿ ಬ್ಯಾಂಕ್ ನಲ್ಲಿರುವ ಒಡವೆಗಳು ನಮ್ಮ ತಾಯಿಯ ಮನೆಯ ಒಡವೆಗಳು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ 3 ಫೋಟೋಗಳನ್ನು ತೋರಿಸಿ ಅದರಲ್ಲಿ ಎದುರುದಾರರು ಧರಿಸಿರುವ ಹಾರ ಬ್ಯಾಂಕ್ ನಲ್ಲಿ ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಕಾರಣಕ್ಕೆ ಸದರಿ ಫೋಟೋಗಳನ್ನು ನಿ ಆರ್ 1 ರಿಂದ 3 ಎಂದು ಗುರುತಿಸಲಾಗಿದೆ. ಬ್ಯಾಂಕ್ ನಲ್ಲಿರುವ ಒಡವೆಗಳು ಎದುರುದಾರರಿಗೆ ಸೇರಿಸಿದ್ದು, ನನ್ನ ತಮ್ಮ ಮನೆ ಕಟ್ಟುವಾಗ ಸದರಿ ಒಡವೆಗಳನ್ನು ಬ್ಯಾಂಕ್ ನಲ್ಲಿ ಅಡವಿಟ್ಟು ಸಾಲ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಒಡವೆಗಳ ಮೇಲೆ ಗಳಿಸಿದ ಸಾಲದಿಂದ ಮನೆ ಕಟ್ಟಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ಗುಂಟೆ ಸೈಟ್ ಇತ್ತು, ರೂ.50 ಸಾವಿರ ಕೊಟ್ಟು ಮನೆ ಲೀಜ್ ಗೆ ಹಾಕಿಸಿಕೊಂಡಿದ್ದರೂ ಹಾಗೂ ನನ್ನ ಅಪ್ಪ ಅಮ್ಮನ ದುಡ್ಡು ಸಹ ನಂದೀಶ್ ಬಳಿ ಇದ್ದು, ಅದನ್ನು ಬಳಳಿ ಮನೆ ಕಟ್ಟಲಾಗಿದೆ ಎಂದು ನುಡಿಯುತ್ತಾರೆ. 2 ಗುಂಟೆ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ, ಆದರೆ ಗೊಬ್ಬರಗಾಲ ಊರಿನವರು ಖರೀದಿಸಿದ್ದು, ಸುಮಾರು 18 ವರ್ಷಗಳ ಹಿಂದೆ ಖರೀದಿಸಿರುತ್ತಾರೆ. ಅದನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರ ನನ್ನ ತಂದೆ ಸತ್ತು ಸುಮಾರು 16-18 ವರ್ಷವಾಗಿರುತ್ತದೆ. ಈ ಕೇಸಿನಲ್ಲಿ ನನ್ನ ತಮ್ಮ ಮನೆಯನ್ನು 2 ಗುಂಟೆ ಸೈಟ್ ಮಾರಾಟ ಮಾಡಿ, ರೂ. 50 ಸಾವಿರ ಲೀಜ್ ಹಣವನ್ನು ಉಪಯೋಗಿಸಿ ಹಾಗೂ ನನ್ನ ತಂದೆ ತಾಯಿಯ ಹಣವನ್ನು ಉಪಯೋಗಿಸಿ ಮನೆ ಕಟ್ಟಿದ್ದಾನೆ ಎಂದು ಹೇಳಿಲ್ಲ. ಒಡವೆಗಳನ್ನು ಎದುರುದಾರರು ನಂದೀಶ್ ಗೆ ಕೊಟ್ಟು ಆತ ಆ ಒಡವೆಗಳ ಮೇಲೆ ಸಾಲ ಪಡೆದು ಮನೆ ಕಟ್ಟಿರುವುದು ನನಗೆ ತಿಳಿದಿದ್ದರೂ ಸಹ ಒಡವೆಗಳನ್ನು ಪಡಯಬೇಕೆಂಬ ದುರುದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಪತಿ ಎಸ್ ಬಿ ಐ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನನ್ನ ಪತಿಯ ಒತ್ತಡದ ಮೇರೆಗೆ ನಾನು ಸುಳ್ಳು ಕೇಸನ್ನು ಹಾಕಿದ್ದು, ನನಗೆ ಒಡವೆಗಳ ಮೇಲೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಒಡವೆಗಳು ನನ್ನ ತಾಯಿ ಮನೆಗೆ ಸೇರಿದು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಾನು 19 ವರ್ಷಕ್ಕೆ ಮದುವೆಯಾಗಿರುತ್ತೇನೆ. ನನಗೆ ಈಗ 36

ವರ್ಷ ಆಗಿದೆ. ನನ್ನ ಮದುವೆಯನ್ನು ನನ್ನ ಪೋಷಕರು ಮಾಡಿಲ್ಲ ಎಂದರೆ ಸಾಕ್ಷಿ ನನ್ನ ತಂದೆ- ತಾಯಿ, ನನ್ನ ಪತಿಯ ತಂದೆ- ತಾಯಿ, ನನ್ನ ಅಕ್ಕ ಸಹ ಬಂದು ಮದುವೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಪ್ರೀತಿಸಿ ಮದುವೆಯಾಗಿದ್ದೇನೆ ಎಂದರೆ ಸರಿ. ನಾನು ಪ್ರೀತಿಸಿ ಮದುವೆಯಾದ ಕಾರಣ ನನ್ನ ತಂದೆ- ತಾಯಿ ನನ್ನ ಮದುವೆಯನ್ನು ಒಪ್ಪದೇ ಇದ್ದು, ನಾನು ಅವರ ಮನೆಯ ಸಂಪರ್ಕವನ್ನು ಕಳೆದುಕೊಂಡಿದ್ದು, ಅವರ ಮನೆಯ ವ್ಯವಹಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪ್ರೀತಿಸಿ ಮದುವೆಯಾದ ನಂತರ ನನ್ನ ತಂದೆ ತಾಯಿಯೊಂದಿಗೆ ಸಂಪರ್ಕ ಕಳೆದುಕೊಂಡಿದ್ದು, ನಂದೀಶ್ ಸತ್ತ ನಂತರ ಆಸ್ತಿ ಪಡೆಯಬೇಕೆಂಬ ದುರುದ್ದೇಶದಿಂದ ಈ ಕೇಸನ್ನು ಹಾಕಿದ್ದೇನ ಎಂದರೆ ಸರಿಯಲ್ಲ. ನನ್ನ ಪತಿ ಬ್ಯಾಂಕ್ ನಲ್ಲಿ ಕೆಲಸದಲ್ಲಿದ್ದು, ಅವರಿಗೆ ಲಭ್ಯವಿರುವ ಮಾಹಿತಿಯ ಮೇರೆಗೆ ಹಾಗೂ ಅವರ ಒತ್ತಡದ ಮೇರೆಗೆ ನಾನು ಈ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

4. ಸಾಮಾನ್ಯವಾಗಿ ರೈತರು ಬ್ಯಾಂಕಿನಲ್ಲಿ ಒಡವೆಯನ್ನು ಅಡಮಾನವಿಟ್ಟು ಸಾಲ ಪಡೆದಲ್ಲಿ ಅದನ್ನು ಕಡಿಮೆ ಬಡ್ಡಿಗೆ ನೀಡಲಾಗುತ್ತದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಎದುರುದಾರರು ನನ್ನ ತಮ್ಮನಿಗೆ ಒಡವೆಯನ್ನು ನೀಡಿ ಸಾಲ ಮಾಡಿ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಂದಿನಿಗೆ ಸೇರಿದ ಒಡವೆಗಳನ್ನು ಪಡೆಯಬೇಕೆಂಬ ದುರುದ್ದೇಶದಿಂದ ನಾನು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಸತ್ತ ನಂತರ ಸುಮಾರು ರಾತ್ರಿ 11 ಗಂಟೆ ಸಮಯಕ್ಕೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಆಗ ಎದುರುದಾರರು ಅಲ್ಲೇ ಇದ್ದರು ಎಂದರೆ ಸರಿಯಲ್ಲ. ಆಕೆ 2 ಗಂಟೆಗೆ ಬಂದು ಕಾರ್ ನಲ್ಲಿ ಬಂದು ಕಾರ್ ನಲ್ಲಿ ಹೋಗಿರುತ್ತಾಳೆ. ನಾನು ನನ್ನ ತಮ್ಮನ ಮರಣದ ನಂತರ ಭೇಟಿ ನೀಡಿರುವುದಿಲ್ಲ ಹಾಗೂ ಆತನ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಮ್ಮನ ಜೊತೆ ವಾಸವಾಗಿರಲಿಲ್ಲ ಮತ್ತು ಆತನ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿರುವುದಿಲ್ಲ ಹಾಗೂ ಆತನ ಮನೆಯಲ್ಲಿ ವಾಸವಿಲ್ಲದೇ ಇದ್ದು, ಎದುರುದಾರರಿಗೆ ಸಂಬಂಧಿಸಿದ ಒಡವೆಗಳನ್ನು ಅಕ್ರಮವಾಗಿ ಪಡೆಯಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಂದೀಶ್ ಅಂತ್ಯಕ್ರಿಯೆಗೆ ಖರ್ಚು ಮಾಡಲು ರೂ. 30 ಸಾವಿರ ಹಣವನ್ನು 1 ನೇ ಎದುರುದಾರರ ಬಳಿ ನೀಡಿರುತ್ತೇನೆ. ನಾನು ನಂದೀಶ್ ಅಂತ್ಯಕ್ರಿಯೆಗೆ ಖರ್ಚು ಮಾಡಲು ರೂ. 30 ಸಾವಿರ ಹಣವನ್ನು 1 ನೇ

ಎದುರುದಾರರ ಬಳಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

5. ನಾನು ಒಡವೆ ಹಾಗೂ ಹಣದ ವಿಚಾರವಾಗಿ ಪಂಚಾಯತಿ ಮಾಡಿಸಿದ್ದು, ಆಗ ನನ್ನ ಚಿಕ್ಕಪ್ಪನಾದ ಮತ್ತು ಎದುರುದಾರರು ಇದ್ದರು. ಯಾವುದೇ ಪಂಚಾಯತಿ ಆಗಿರುವುದಿಲ್ಲ ಹಾಗೂ ಅದರಲ್ಲಿ ನನ್ನ ಚಿಕ್ಕಪ್ಪ ಮತ್ತು ಎದುರುದಾರರು ಇರಲಿಲ್ಲ ಎಂದರೆ ಸರಿಯಲ್ಲ. ಕೇಸಿಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ